## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1205
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 29.12.2022
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರದ ವಿವಿಧ ಇಲಾಖೆಗಳ 'ಗ್ರೂಪ್ 'ಬಿ' ಮತ್ತು 'ಸಿ' ವೃಂದದ ಅಧಿಕಾರಿ ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್ ಮೂಲಕ ದಾಖಲಿಸುವುದನ್ನು ಕಡ್ಡಾಯಗೊಳಿಸಿ ಆದೇಶಿಸಲಾಗಿದೆಯೇ; (ಆದೇಶ ಪ್ರತಿ ನೀಡುವುದು) | ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 2000 ರ ನಿಯಮಗಳಿಗೆ ಅಧಿಸೂಚನೆ ಸಂಖ್ಯೆ: ಸಿಆಸುಇ 26 ಸೇವನೆ 2020 ದಿನಾಂಕ: 15.07.2020ರಲ್ಲಿ ತಿದ್ದುಪಡಿ ಮಾಡಿ ಎಲ್ಲಾ ಗ್ರೂಪ್ 'ಬಿ' ಮತ್ತು 'ಸಿ' ವೃಂದದ ಅಧಿಕಾರಿ/ನೌಕರರ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್ ಮೂಲಕ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. (ಅಧಿಸೂಚನೆಯ ಪ್ರತಿಯನ್ನು ಅನುಬಂಧದಲ್ಲಿ ಇರಿಸಿದೆ). |
| (ಆ) | ಆಗಿದ್ದಲ್ಲಿ, ಯಾವ ಸಾಲಿನಿಂದ ಕಾರ್ಯನಿರ್ವಹಣಾ ವರದಿಗಳನ್ನು ಭೌತಿಕವಾಗಿ (ಹಸ್ತಚಾಲಿತ ಪ್ರತಿ) ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ; ಒಂದು ವೇಳೆ ಕಾರ್ಯನಿರ್ವಹಣಾ ವರದಿಗಳ ಹಸ್ತಚಾಲಿತ ಪತ್ರಿಯಲ್ಲಿ ಷರಾ ನಮೂದಿಸಿ ಅಂಗೀಕರಿಸಿದ್ದರೆ ಮಾನ್ಯತೆ ಇಲ್ಲವೆ; (ವಿವರ ನೀಡುವುದು) | ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 124 ಕತವ 2019, ದಿನಾಂಕ: 18.08.2020 ರಲ್ಲಿ 2020-21 ನೇ ಸಾಲಿನಿಂದ ಗ್ರೂಪ್-ಬಿ ಮತ್ತು ಸಿ ವೃಂದದ ಅಧಿಕಾರಿ/ನೌಕರರ ಇ-ಪರ್ಫಾಮೆನ್ಸ್ ರಿಪೋರ್ಟಿಂಗ್ ಸಿಸ್ಟಂ (ಇ-ಪಿಆರ್‌ಎಸ್) ನ ಮೂಲಕ ಸೃಜಿಸಲಾದ ಕಾರ್ಯನಿರ್ವಹಣಾ ವರದಿಗಳನ್ನು ಸಲ್ಲಿಸಲು ಕಡ್ಡಾಯಗೊಳಿಸಿ, ಭೌತಿಕ (Manual) ಕಾರ್ಯನಿರ್ವಹಣಾ ವರದಿಗಳನ್ನು ಅಂಗೀಕರಿಸತಕ್ಕದ್ದಲ್ಲವೆಂದು ಎಲ್ಲಾ ಇಲಾಖೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)ಯಿಂದ ಸೂಚನೆ ನೀಡಲಾಗಿದೆ. |
| (ಇ) | ಬಹುತೇಕ ಇಲಾಖೆಗಳು ಗ್ರೂಪ್ 'ಬಿ' ಮತ್ತು 'ಸಿ' ವೃಂದ ಅಧಿಕಾರಿ/ ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಗಳನ್ನು ಇ-ಪರ್ಫಾಮೆನ್ಸ್ ರಿಪೋರ್ಟಿಂಗ್ ಸಿಸ್ಟಂ (ಇ-ಪಿಆರ್‌ಎಸ್) ಮೂಲಕ ದಾಖಲಿಸುವುದಕ್ಕೆ ಅವಕಾಶ ಕಲ್ಪಿಸದೇ ಇರುವುದರಿಂದ ಅನಾನುಕೂಲ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಇದಕ್ಕೆ ಪರಿಹಾರವೇನು; | ಬಂದಿರುವುದಿಲ್ಲ. |
| (ಈ) | ಇ-ಪಿಆರ್‌ಎಸ್ ಮೂಲಕ ದಾಖಲಿಸಿದ ಕಾರ್ಯನಿರ್ವಹಣಾ ವರದಿಗಳನ್ನು ಮಾತ್ರ | |



Generated from eOffice by G JAGADEESHA, CMO-JS(GJ), JOINT SECREATRY, CMO on 16/12/2022 01:42 PM

| | | |
|---|---|---|
| | ಪದೋನ್ನತಿ ಮತ್ತು ಇನ್ನಿತರೆ ಸಂದರ್ಭಗಳಲ್ಲಿ ಪರಿಗಣಿಸತಕ್ಕದ್ದು ಎಂದಿರುವುದರಿಂದ ಇ-ಪಿಆರ್‌ಎಸ್ ಮೂಲಕ ಕಾರ್ಯನಿರ್ವಹಣಾ ವರದಿಗಳನ್ನು ದಾಖಲಿಸುವುದಕ್ಕೆ ಅವಕಾಶ ಮಾಡಿಕೊಡುವವರೆಗೂ ಭೌತಿಕ (ಹಸ್ತಚಾಲಿತ) ಕಾರ್ಯನಿರ್ವಹಣಾ ವರದಿಗಳನ್ನು ಷರಾ ನಮೂದಿಸಿ ಅಂಗೀಕರಿಸಲು ಅವಕಾಶ ಮಾಡಿಕೊಡಲಾಗುವುದೇ? (ಈ ಬಗ್ಗೆ ಸೂಕ್ತ ಸ್ಪಷ್ಟನೆ ನೀಡುವುದು) | ಕಾರ್ಯನಿರ್ವಹಣಾ ವರದಿಗಳನ್ನು ಸಂಪೂರ್ಣವಾಗಿ ಇ-ಪರ್ಫಾಮೆನ್ಸ್ ರಿಪೋರ್ಟಿಂಗ್ ಸಿಸ್ಟಂ (ಇ-ಪಿಆರ್‌ಎಸ್) ಮೂಲಕ ತ್ವರಿತಗತಿಯಲ್ಲಿ ಜಾರಿಗೊಳಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |

ಸಂಖ್ಯೆ: ಸಿಆಸುಇ 129 ಸೇವನೆ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 16/12/2022 01:42 PM

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ 4 ಎ<br>Part – IVA | ಬೆಂಗಳೂರು, ಬುಧವಾರ,15, ಜುಲೈ, 2020 (ಆಷಾಢ ,24,ಶಕವರ್ಷ ೧೯೪೨)<br>Bengaluru, WEDNESDAY, 15, JULY, 2020 (Ashadha,24,ShakaVarsha 1942) | ನಂ. 291<br>No. 291 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 26 ಎಸ್‌ಸಿಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:15.07.2020

## ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡವನ್ನು ಪ್ರಕರಣ 8ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ, ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) (ತಿದ್ದುಪಡಿ) ನಿಯಮಗಳು, 2020ರ ಕರಡನ್ನು ಅಧಿಸೂಚನೆ ಸಂಖ್ಯೆ: ಸಿಆಸುಇ 26 ಎಸ್‌ಸಿಆರ್ 2020, ದಿನಾಂಕ:19-06-2020 ಅನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆ ಭಾಗ-IV-ಎ (ಸಂಖ್ಯೆ:210), ದಿನಾಂಕ:19-06-2020ರ ಪ್ರಕಟಿಸಿದ್ದು ಅಧಿಕೃತ ರಾಜ್ಯಪತ್ರದಲ್ಲಿ ಕರಡನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ.

ಸದರಿ ರಾಜ್ಯಪತ್ರವನ್ನು ದಿನಾಂಕ:19-06-2020ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಸದರಿ ಕರಡಿನ ಸಂಬಂಧದಲ್ಲಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸಿಲ್ಲದಿರುವುದರಿಂದ;

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) (ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 2ರ ತಿದ್ದುಪಡಿ:-**ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000 (ಇನ್ನು ಮುಂದೆ ಸದರಿ ನಿಯಮಗಳು ಎಂದು ಕರೆಯಲ್ಪಡುವ) ನಿಯಮ 2ರ ಉಪ ನಿಯಮ (1)ರ ಖಂಡ (ಇ)ರಲ್ಲಿ "ವೃಂದ ಬಿ ಮತ್ತು ಸಿ ನೌಕರರಿಗೆ ಸಂಬಂಧಿಸಿದಂತೆ" ಎಂಬ ಪದಗಳಿಗೆ ಬದಲಾಗಿ "ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಗ್ರೂಪ್-ಬಿ ಮತ್ತು ಸಿ ಅಧಿಕಾರಿಗಳ ವರ್ಗಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನವಾಗಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**3. ನಿಯಮ 3ರ ತಿದ್ದುಪಡಿ:-**ಸದರಿ ನಿಯಮಗಳ ನಿಯಮ 3ರ ಉಪ ನಿಯಮ (2)ರ ಖಂಡ (ಎ)ರಲ್ಲಿ "ವೃಂದ ಬಿ ಮತ್ತು ಸಿ ನೌಕರರಿಗೆ ಸಂಬಂಧಿಸಿದಂತೆ" ಎಂಬ ಪದಗಳಿಗೆ ಬದಲಾಗಿ "ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಗ್ರೂಪ್-ಬಿ ಮತ್ತು ಸಿ ಅಧಿಕಾರಿಗಳ ವರ್ಗಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನವಾಗಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**4. ನಿಯಮ 4ರ ತಿದ್ದುಪಡಿ:-**ಸದರಿ ನಿಯಮಗಳು ನಿಯಮ 4ರ ಉಪ ನಿಯಮ (1)ರಲ್ಲಿ "ವೃಂದ ಬಿ ಮತ್ತು ಸಿ ನೌಕರರಿಗೆ ಸಂಬಂಧಿಸಿದಂತೆ" ಎಂಬ ಪದಗಳಿಗೆ ಬದಲಾಗಿ

"ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಗ್ರೂಪ್-ಬಿ ಮತ್ತು ಸಿ ಅಧಿಕಾರಿಗಳ ವರ್ಗಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನವಾಗಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮಾ ವರದಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

## GOVERNMENT OF KARNATAKA

No. DPAR 26 SCR 2020

Karnataka Government Secretariat,
VidhanaSoudha,
Bengaluru, dated:15.07.2020

## NOTIFICATION

Whereas the draft of the Karnataka Civil Services (Performance Reports) (Amendment) Rules, 2020, was published as required by clause (a) of sub-section (2) of Section 3 read with Section 8 of the Karnataka State Civil Services Act, 1978 (Karnataka Act 14 of 1990) in Notification No. DPAR 26 SCR 2020 dated: 19.06.2020 in Part IV-A (No-210) of the Karnataka Gazette Extraordinary dated: 19.06.2020 inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas, the said Gazette was made available to the public on 19.06.2020

And whereas, no objections and suggestions have been received in this behalf by the State Government.

Now, therefore, in exercise of the powers conferred by sub-section (1) of Section 3 read with Section 8 of the Karnataka State Civil Services Act, 1978

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(Karnataka Act 14 of 1990), the Government of Karnataka hereby makes the following rules, namely;

## RULES

1. **Title and Commencement.**-(1) These rules may be called the Karnataka Civil Services (Performance Reports) (Amendment) Rules, 2020

(2) They shall come into force from the date of their final publication in the Official Gazette.

**2. Amendment of Rule 2.**- In the Karnataka Civil Services (Performance Reports) Rules, 2000 (hereinafter referred to as the said rules), in rule 2, in sub-rule (1),in clause (e), for the words, "in respect of Group-B and C officials" the words "or electronically in respect of such category of Group-B and C officials as specified by the Government" shall be substituted.

**3. Amendment of Rule 3.**-In rule 3 of the said rules, in sub rule (2), in clause (a), for the words, "in respect of Group-B and C officials" the words "or electronically in respect of such category of Group-B and C officials as specified by the Government" shall be substituted.

**4. Amendment of Rule 4.**-In rule 4 of the said rules, in sub rule (1), for the words, "in respect of Group-B and C officials" the words "or electronically in respect of such category of Group-B and C officials as specified by the Government" shall be substituted.

By Order and in the name of the
Governor of Karnataka

(UMA VARADAIAH)
Under Secretary to Government
Department of Personnel and
Administrative Reforms
(Service Rules-1)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE